# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.1485/2022

| | | | |
|---|---|---|---|
| ಚಾಸಾ | **2** | ಪ್ರಾಸಾ | **2** |
| ಹೆಸರು | | ಅರುಣ್ ಕುಮಾರ್ ಬಿ ಡಿ | |
| ತಂದೆಯ ಹೆಸರು | | ದೊಡ್ಡೇಗೌಡ ಬಿ | |
| ವಯಸ್ಸು | | **39**ವರ್ಷಗಳು | |
| ಉದ್ಯೋಗ | | ಖಾಸಗಿ ನೌಕರ | |
| ವಿಳಾಸ | | ಗಿರಿನಗರ**,** | |

ದಿನಾಂಕ**.04.03.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಗೊತ್ತಿಲ್ಲ**.** ಚಾಸಾ**-1, 3** ರಿಂದ ಚಾಸಾ**.6** ರವರು ನನಗೆ ಗೊತ್ತು**.**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ**.** ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು**,** ಅದನ್ನು ಈಗಾಗಲೇ ನಿಪಿ**-2** ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದೂರು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಿ.ಪಿ. 2ಕ್ಕೆ ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಮತ್ತು ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿನಾಂಕ.23.10.2021ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ನಮ್ಮ ಕಂಪನಿಯ ನೌಕರನಾದ ಶಬರೀಶ್ ಎನ್ನುವವರು ಕಂಪನಿಗೆ ಬರುವುದಕ್ಕಾಗಿ ತಮ್ಮ ಬಾಬ್ತು ವಾಹನ ಸಂಖ್ಯೆ ಕೆಎ-05-ಎಲ್.ಡಿ.-7825 ರ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದಾಗ

ಹಾರೋಹಳ್ಳಿ **-**ಬಿಡದಿ ರಸ್ತೆ ಸಿದ್ದಾಪುರ ಪೆಟ್ರೋಲ್ ಬಂಕ್ ಹತ್ತಿರ ಬಿಡದಿ ಕಡೆಯಿಂದ ಹಾರೋಹಳ್ಳಿ ಕಡೆಗೆ ಬರುತ್ತಿದ್ದ ವಾಹನ ಸಂಖ್ಯೆಃ ಕೆಎ**-42-**ಕೆ**-4673** ರ ವಾಹನದ ಚಾಲಕನು ಸದರಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಶಬರೀಶ್ ರವರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ**.** ಸದರಿ ಅಪಘಾತದಿಂದಾಗಿ ಎರಡೂ ದ್ವಿಚಕ್ರ ವಾಹನದ ಚಾಲಕರಿಗೆ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ**.** ಆ ಸಮಯದಲ್ಲಿ ನಾನು ಸ್ಥಳದಲ್ಲಿಯೇ ಹಾಜರು ಇದ್ದೆ ಎಂದರೆ ಸರಿಯಲ್ಲ**.** ಅಪಘಾತದ ವಿಚಾರವನ್ನು ನಾನೇ ಪೋನಿನ ಮೂಲಕ ಚಾಸಾ-1 ರವರಿಗೆ ತಿಳಿಸಿರುತ್ತೇನೆಂದರೆ ಸರಿಯಲ್ಲ.

ಈ ಮೇಲಿನ ಅಪಘಾತಕ್ಕೆ ಸಂಬಂಧಿಸಿದಂತೆ ಪೋಲೀಸರು ದಿಃ **25.10.2021** ರಂದು ಘಟನಾ ಸ್ದಳಕ್ಕೆ ಬಂದು ಚಾಸಾ**-1** ರವರು ತೋರಿಸಿದ ಸ್ದಳದಲ್ಲಿ ನನ್ನ ಹಾಗೂ ಚಾಸಾ**-1** ಮತ್ತು ಚಾಸಾ**-3** ರವರ ಸಮಕ್ಷಮ ಸಂಜೆ **4.30** ರಿಂದ **5.15** ರ ವರೆಗೆ ಸ್ದಳ ಪರಿಶೀಲನೆ ಮಾಡಿ ಅಪಘಾತ ಪಡಿಸಿದ ಮತ್ತು ಅಪಘಾತಕ್ಕೆ ಒಳಗಾದ ವಾಹನಗಳನ್ನು ನಮ್ಮ ಸಮಕ್ಷಮ ಸ್ಥಳದಿಂದ ಅಮಾನತ್ತುಪಡಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ಒಂದು ಮಹಜರ್ ನ್ನು ತಯಾರಿಸಿ ಅದರ ವಿಚಾರ ನಮಗೆ ಓದಿ ಹೇಳಿ ಸ್ದಳದಲ್ಲಿಯೇ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ**.** ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಪೋಲಿಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ**.** ಹೇಳಿಕೆಯ ಭಾಗವನ್ನು ನಿ**.**ಪಿ**.7** ಎಂದು ಗುರುತಿಸಲಾಯಿತು**.**

ನನಗೆ ಅಪಘಾತದ ಬಗ್ಗೆ ಮಾಹಿತಿ ಇದ್ದರು, ಆರೋಪಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ನಿಪಿ-**2** ಮತ್ತು ನಿಪಿ-**7** ರಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**